**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಸ್.ಸಿ. ಸಂಖ್ಯೆಃ 39/2013**

ದಿನಾಂಕಃ 02.11.2021
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 23 ಪ್ರಾಸಾ - 12

| | | |
|---|---|---|
| ಹೆಸರು | ಃ | ಡಾ.ರವಿ ಎಂ. ತಿರ್ಲಾಪೂರ |
| ತಂದೆಯ/ಗಂಡನ ಹೆಸರು | ಃ | ಲೇಟ್ ಎಂ.ಬಿ.ತಿರ್ಲಾಪೂರ |
| ವಯಸ್ಸು | ಃ | 49 ವರ್ಷ |
| ಉದ್ಯೋಗ | ಃ | ಆಪ್ತಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು. |
| ವಾಸಸ್ಥಳ | ಃ | ಬೆಂಗಳೂರು. |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು ಜೂನ್ 2011 ರಿಂದ ಜನವರಿ 2013 ರವರೆಗೆ ರಾಮನಗರ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ, ದಿನಾಂಕ 19.05.2012 ರಂದು ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯಿಂದ ಬಂದ ಮಾಹಿತಿ ಮೇರೆಗೆ, ಶ್ರೀಮತಿ.ಸುಕನ್ಯ ಕೋಂ.ಹನುಮಂತರಾಜು ರವರ ಶವತನಿಖಾ ಕ್ರಮವನ್ನು ಬೆಂಗಳೂರಿನ ರಾಜರಾಜೇಶ್ವರಿ ಆಸ್ಪತ್ರೆಯ ಶವಾಗಾರದಲ್ಲಿ ಸದರಿ ದಿನದಂದೇ ಕೈಗೊಂಡಿರುತ್ತೇನೆ. ಈ ಬಗ್ಗೆ ವಿವರವಾದ ಮಹಜರ್ ಬರೆದಿದ್ದೇನೆ.

3. ಸದರಿ ಶವ ತನಿಖಾ ಕ್ರಮವನ್ನು ಈಗಾಗಲೇ ನಿಶಾನೆ ಪಿ22 ಎಂದು ಗುರುತು ಮಾಡಲಾಗಿದ್ದು, ನಿಶಾನೆ ಪಿ 22 ರಲ್ಲಿರುವ ಸಾಕ್ಷಿಯ ರುಜುವನ್ನು ನಿಶಾನೆ ಪಿ 22(ಬಿ) ಎಂದು ಗುರುತು ಮಾಡಲಾಯಿತು.

4. ಸುಕನ್ಯ ತನ್ನ ಗಂಡ ಹಾಗು ಅತ್ತೆಮಾವಂದಿರ ಮಾನಸಿಕ ಹಾಗು ದೈಹಿಕ ಕಿರುಕುಳದ ಹಿನ್ನೆಲೆಯಲ್ಲಿ ನೊಂದು ಕೀಟನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಶವ ತನಿಖಾ ಕಾಲದಲ್ಲಿ ನನಗೆ ಗೊತ್ತಾಗಿದೆ.

**<u>ಪಾಟೀ ಸವಾಲುಃ</u> ಶ್ರೀ.ಕೆ.ಎಸ್.ಎನ್. ವಕೀಲರಿಂದ – ಆರೋಪಿಗಳ ಪರವಾಗಿಃ-**

5. ನಾನು ಮುಖ್ಯವಿಚಾರಣೆಯಲ್ಲಿ ನುಡಿದಂತೆ ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ಶವತನಿಖಾ ಕ್ರಮವನ್ನು ಕೈಗೊಂಡಿರುವುದಿಲ್ಲ, ಪೊಲೀಸರು ಬರೆದು ತಂದು ನೀಡಿದ ದಾಖಲೆಗೆ ರುಜು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿಗಳನ್ನು ಶವತನಿಖಾ ಸಮಯ ಎಂದು ಹೇಳಲಾದ ಸಮಯದಲ್ಲಿ ವಿಚಾರಣೆಗೆ ಒಳಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ನುಡಿದಂತೆ ಸುಕನ್ಯಳ ಸಾವಿನ ಕಾರಣ ಜರುಗಿಲ್ಲ, ನಾನು ಉಲ್ಲೇಖಿಸಿದ ಕಾರಣ ಕಾಲ್ಪನಿಕ ಮತ್ತು ಸೃಷ್ಟಿಸಲ್ಪಟ್ಟ ಕಾರಣ ಎಂದರೆ ಸರಿಯಲ್ಲ.

6. ಸುಕನ್ಯ ತನ್ನ ಮಗುವಿನ ಹೃದಯದ ಅನಾರೋಗ್ಯ ಕುರಿತಂತೆ ಚಿಕಿತ್ಸೆ ಸಲುವಾಗಿ ಪ್ರತ್ಯೇಕ ಮನೆ ಮಾಡಬೇಕೆಂದು ತನ್ನ

ಗಂಡನಿಗೆ ಸೂಚಿಸುತ್ತಿದ್ದು, ಈ ಬಗ್ಗೆ ಪ್ರತ್ಯೇಕ ಮನೆಯನ್ನು ಆಕೆಯ ಸೂಚನೆಯಂತೆ ಮಾಡದಿದ್ದ ಕಾರಣ, ತನ್ನ ಮಾತು ಕೇಳಲಿಲ್ಲವೆಂದು ಸುಕನ್ಯ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆಯೇ ವಿನಃ ವರದಕ್ಷಿಣೆಯ ಕಾರಣಗಳು ಯಾವುದು ಇಲ್ಲ ಎಂಬುವುದಾಗಿ ನನ್ನ ಶವತನಿಖಾ ಕಾಲದಲ್ಲಿ ತಿಳಿದು ಬಂದಿದೆ ಎಂದರೆ ಸರಿಯಲ್ಲ.

7. ಆರೋಪಿಗಳ ಪಾತ್ರ ಸುಕನ್ಯನ ಆತ್ಮಹತ್ಯೆಯಲ್ಲಿ ಇಲ್ಲ ಎಂಬುವುದಾಗಿ ಸಹ ನನಗೆ ತಿಳಿದು ಬಂತು ಎಂದರೆ ಸರಿಯಲ್ಲ. ಆರೋಪಿಗಳೇ ಇಲಾಜಿಗೆಂದು ಸುಕನ್ಯಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾದರೆ ಮಾರ್ಗಮಧ್ಯೆ ಸುಕನ್ಯ ನಿಧನ ಹೊಂದಿರುತ್ತಾಳೆ ಎಂಬುವುದಾಗಿ ತಿಳಿದು ಬಂತು ಎಂದರೆ ಸರಿಯಲ್ಲ.

8. ಸೂಚಿಸಿದ ಕಾರಣಗಳಿಗೆ ನನ್ನ ಮುಖ್ಯವಿಚಾರಣೆಯ ಹೇಳಿಕೆ ಕಾಲ್ಪನಿಕ ಮತ್ತು ಸೃಷ್ಟಿಸಲ್ಪಟ್ಟ ಹೇಳಿಕೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.